**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 08-07-2024.**

**ಪಾಟೀ ಸವಾಲು - 11 ಮತ್ತು 12 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ನನಗೆ 55 ವರ್ಷ ವಯಸ್ಸು. ನಾನು ಅವಿದ್ಯಾವಂತ. ನನ್ನ ತಂದೆಯ ಹೆಸರು ಚಿಕ್ಕ ಲಕ್ಷ್ಮಯ್ಯ. ಚಿಕ್ಕಲಕ್ಷ್ಮಯ್ಯ ಅವರಿಗೆ ಒಟ್ಟು 4 ಜನ ಮಕ್ಕಳು. ಅವರು ಹನುಮಾಂಜಿನಪ್ಪ, ಆಂಜಿನಪ್ಪ, ಲಕ್ಷ್ಮಯ್ಯ ಮತ್ತು ಮುನಿಲಕ್ಷ್ಮಯ್ಯ. ನಮ್ಮ ತಂದೆ ಚಿಕ್ಕ ಲಕ್ಷ್ಮಯ್ಯ, ದೊಡ್ಡ ಲಕ್ಷ್ಮಯ್ಯ ಮತ್ತು ತಿಮ್ಮಪ್ಪ ಮೂವರೂ ಸಹೋದರರು. ದೊಡ್ಡ ಲಕ್ಷ್ಮಯ್ಯ ಪತ್ನಿಯ ಹೆಸರು ತಿಮ್ಮಕ್ಕ. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಅವರ ಹೆಸರು ಹನುಮಕ್ಕ ಮತ್ತು ಅಕ್ಕಯ್ಯಮ್ಮ ಆಗಿರುತ್ತದೆ. ಸದರಿ ಅಕ್ಕಯ್ಯಮ್ಮ ವಿವಾಹವಾಗದೇ ಮರಣ ಹೊಂದಿರುತ್ತಾರೆ. ದೊಡ್ಡ ಲಕ್ಷ್ಮ ಯ್ಯ ಮರಣ ಹೊಂದಿದ ನಂತರ ಅವರ ಭಾಗದ ಸ್ವತ್ತು ಹನುಮಕ್ಕ ಅವರಿಗೆ ಹೋಗಿರುತ್ತದೆ. ದೊಡ್ಡ ಲಕ್ಷ್ಮಯ್ಯ ಮತ್ತು ತಿಮ್ಮಕ್ಕ ಮರಣ ಹೊಂದಿದ ನಂತರ ಖಾತೆ ಮತ್ತು ಪಹಣಿಗಳು ಅವರ ಮಕ್ಕಳ ಹೆಸರಿಗೆ ಬಂದಿರುತ್ತವೆ ಎಂದರೆ ಸರಿ. ಅವರು ಸದರಿ ಸ್ವತ್ತುಗಳ ಸ್ವಾ ಧೀನದಲ್ಲಿದ್ದಾರೆ ಎಂದರೆ ಸರಿ. ಹನುಮಕ್ಕ ಅವರ ಭಾಗಕ್ಕೆ ಬಂದ ಸ್ವತ್ತುಗಳು ಈ ದಾವೆಯ ದಾವಾ ಸಂಖ್ಯೆ ನಂ.2, 3 ಮತ್ತು 5 ಆಗಿರುತ್ತವೆ ಎಂದರೆ ಸರಿ. ಸದರಿ ಮೂರು ಸ್ವತ್ತುಗಳ ಕಂದಾಯ ದಾಖಲೆಗಳು ಹನುಮಕ್ಕ ಅವರ ಹೆಸರಿನಲ್ಲಿವೆ. ಹನುಮಕ್ಕ ಅವರು 1966 ರಲ್ಲಿ ಸದರಿ ಮೂರು ಸ್ವತ್ತುಗಳನ್ನು ಚಿಕ್ಕ ಮುನಿಯಪ್ಪ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರಗಳು ನೋಂದಣಿಯಾಗಿರುತ್ತವೆ ಎಂದರೆ ಸರಿ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ಚಿಕ್ಕ ಮುನಿಯಪ್ಪ ಅವರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಚಿಕ್ಕ ಮುನಿಯಪ್ಪ ಅವರು ಸದರಿ ಸ್ವತ್ತಿನ ಸ್ವಾ ಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ಸಂಖ್ಯೆ 12-2 ರಲ್ಲಿ 29 ಗುಂಟೆ ದೊಡ್ಡ ಲಕ್ಷ್ಮಯ್ಯ ಅವರ ಹೆಸರಿನಲ್ಲಿದ್ದು, 26 ಗುಂಟೆ ಚಿಕ್ಕ ಮುನಿಯಪ್ಪ ಅವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. 1965 ರಲ್ಲಿ ನಮ್ಮ ತಂದೆ ಮತ್ತು ಅವರ ಸಹೋದರರ ಮಧ್ಯೆ ವಿಭಾಗ ಆಗಿರುತ್ತದೆ ಎಂದರೆ ಸರಿ. ಆ ಬಗ್ಗೆ ವ್ಯವಸ್ಥಾ ಪತ್ರವನ್ನು ನೋಂದಣಿ ಮಾಡಿಸಿರುತ್ತಾರೆ ಎಂದರೆ ಸರಿ. ಆವತ್ತಿನಿಂದ ಅವರು ಬೇರೆ ಬೇರೆಯಾಗಿ ವಾಸವಿರುತ್ತಾರೆ ಎಂದರೆ ಸರಿ. ಸದರಿ ವ್ಯವಸ್ಥಾ ಪತ್ರಕ್ಕೆ ನಮ್ಮ ತಂದೆ ಸಹಿ

ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಕನಾರುವುದರಿಂದ ನನ್ನ ಪರವಾಗಿ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ವ್ಯವಸ್ಥಾ ಪತ್ರದಲ್ಲಿ ನಮ್ಮ ತಂದೆಯ ಭಾಗಕ್ಕೆ ಒಂದು ಮನೆಯನ್ನು ನೀಡಲಾಗಿದೆ ಎಂದರೆ ಸರಿ. ಸದರಿ ವ್ಯವಸ್ಥಾ ಪತ್ರದಲ್ಲಿ ದಾವಾ ಐಟಂ ಸಂಖ್ಯೆ 2, 3 ಮತ್ತು 5 ದೊಡ್ಡ ಲಕ್ಷ್ಮಯ್ಯ ಮತ್ತು ತಿಮ್ಮಕ್ಕ ಅವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ಸದರಿ ಮೂರು ಸ್ವತ್ತುಗಳಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಮೂರು ಸ್ವತ್ತುಗಳಲ್ಲಿ 1965 ರಿಂದ ಹನುಮಕ್ಕ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ 29 ಗುಂಟೆ ಜಮೀನಿನ ಸ್ವಾಧೀನವನ್ನು ನಾನು ಹೊಂದಿದ್ದೇನೆ, ಉಳಿದ ಜಮೀನುಗಳ ಸ್ವಾಧೀನವನ್ನು ಅವರು ಹೊಂದಿದ್ದಾರೆ ಎಂದು ನುಡಿಯುತ್ತೇನೆ. ಸದರಿ ಮೂರೂ ಸ್ವತ್ತುಗಳಿಗೆ ಹನುಮಕ್ಕ ಅವರೇ ಮಾಲೀಕರಾಗಿದ್ದರು ಎಂದರೆ ಸರಿ. ಆದರೆ ಆಸ್ತಿ ವಿಭಾಗ ಆಗಿರಲಿಲ್ಲ ಎಂದು ನುಡಿಯುತ್ತೇನೆ. ಅವರ ಮಾಲೀಕರಾಗಿರುವುದರಿಂದ ಸದರಿ ಸ್ವತ್ತುಗಳನ್ನು 11 ಮತ್ತು 12 ನೇ ಒಪ್ರತಿವಾದಿಗಳ ತಂದೆ ಚಿಕ್ಕ ಮುನಿಯ್ಪಪ್ಪ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ಚಿಕ್ಕ ಮುನಿಯಪ್ಪ ಅವರಿಗೆ ಖಾತೆ, ಪಹಣಿ ಬಂದಿರುತ್ತವೆ ಎಂದರೆ ಸರಿ. ಸದರಿ ಸ್ವತ್ತುಗಳ ಸ್ವಾಧೀನವನ್ನು ಈಗ 11 ಮತ್ತು 12 ನೇ ಪ್ರತಿವಾದಿಗಳು ಹೊಂದಿರುತ್ತಾರೆ ಎಂದರೆ ಸರಿ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**